# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 06-03-2021 ರಂದು ಸಮಯ 10.30 ಗಂಟೆಗೆ ವಾರ್ಡ್ ಸಂಖ್ಯೆ: 155 ಹನುಮಂತನಗರ'ಕ್ಕೆ ಸಂಬಂಧಪಟ್ಟಂತೆ ಹರಿಹರಗುಡ್ಡ ಉದ್ಯಾನವನ (ತಿಮ್ಮೇಶಪ್ರಭು ಉದ್ಯಾನವನ) ದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ), ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ ಆನಂದ್.ಜಿ, ಕಿರಿಯ ಅಭಿಯಂತರರು ವಾ.ನಂ.-155 – ಸದಸ್ಯ ಕಾರ್ಯದರ್ಶಿ
3. ಶ್ರೀ. ನಟರಾಜ್ (ಹಿ.ಆ.ಪ.) – ಸದಸ್ಯರು
4. ಶ್ರೀ ಪ್ರಕಾಶ್ (ಟಿ.ಇ.)– ಸದಸ್ಯರು
5. ಶ್ರೀಮತಿ.ನಂದಿನಿ (ಸ.ಅ-155) ಬಿಡಬ್ಲ್ಯೂಎಸ್‌ಎಸ್‌ಬಿ
6. ಶ್ರೀ.ರಾಮಚಂದ್ರ (ಕಿ.ಅ-155) ಬೆಸ್ಕಾಂ
7. ಶ್ರೀ.ಕೆ.ವೆಂಕಟೇಶ ಎ.ಎಸ್.ಐ ಬಸವನಗುಡಿ ಸಂಚಾರಿ ಠಾಣೆ
8. ಶ್ರೀ ಪಿಳ್ಳಪ್ಪ – ಸಾರ್ವಜನಿಕರು.
9. ಶ್ರೀ ಎಂ. ಚಂದ್ರಶೇಖರ್– ಸಾರ್ವಜನಿಕರು.
10. ಶ್ರೀ ಉದಯ– ಸಾರ್ವಜನಿಕರು.
11. ಶ್ರೀ ಶ್ರೀನಿವಾಸ – ಸಾರ್ವಜನಿಕರು.
12. ಶ್ರೀ ಸುರೇಶ್ ಕುಮಾರ್ – ಸಾರ್ವಜನಿಕರು.
13. ಶ್ರೀಮತಿ ದೇವಕಿ– ಸಾರ್ವಜನಿಕರು.
14. ಶ್ರೀಮತಿ ಆರ್.ಪದ್ಮ – ಸಾರ್ವಜನಿಕರು.
15. ಶ್ರೀಮತಿ ಗಿರಿಜಾಂಬ – ಸಾರ್ವಜನಿಕರು.

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ 155ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ನೆರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳು.**

1) ಜಿಂಕೆ ಉದ್ಯಾನವನದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿರುವುದಿಲ್ಲ ಎಂದು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿಷಯದ ಕುರಿತು ಜಿಂಕೆ ಉದ್ಯಾನವಕ್ಕೆ ಈಗಾಗಲೇ ಅನುದಾನ ದೊರೆತಿದ್ದು, ಸದರಿ ಕಾಮಗಾರಿಯು ಟೆಂಡರ್ ಆಹ್ವಾನಿಸಿ ಘನ ಸರ್ಕಾರದ ಅನುಮೋದನೆ ದೊರೆತ ಕೂಡಲೆ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ಕಿರಿಯ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

2) ಚಂದ್ರಗುಪ್ತ ಮೌರ್ಯ ರಸ್ತೆಯು ತುಂಬಾ ಹಾಳಾಗಿದ್ದು ರಸ್ತೆಯ ಡಾಂಬರೀಕರಣ ಮಾಡಿಕೊಂಡುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕಿರಿಯ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

ಪು.ತಿ.ನೋ

Scanned with CamScanner

Scanned with CamScanner

3) 4ನೇ ಅಡ್ಡರಸ್ತೆ, ಲಕ್ಷ್ಮೀಪುರ, ಮಾದಕರಿನಾಯಕ ರಸ್ತೆ ಹಾಗೂ ಕಾವೇರಿ ನದಿ ರಸ್ತೆಯಲ್ಲಿ ಡಾಂಬರೀಕರಣ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಬಹಳ ವರ್ಷಗಳಾಗಿದ್ದು ರಸ್ತೆಯು ಹಾಗೂ ಫುಟ್‌ಪಾತ್ ತುಂಬಾ ಹಾಳಾಗಿರುವುದರಿಂದ ಅಭಿವೃದ್ಧಿಪಡಿಸಲು ಕೋರಿ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕಿರಿಯ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

4) ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಬದಿಯಲ್ಲಿ ಅಲ್ಲಲ್ಲಿ ಮರದ ಬುಡಗಳು ಇರುವುದರಿಂದ ರಸ್ತೆಯಲ್ಲಿ ಚಲಿಸುವ ವಾಹನಗಳಿಗೆ ತುಂಭಾ ತೊಂದರೆಯಾಗುತ್ತಿರುವುದರಿಂದ ತೆರವುಗೊಳಿಸಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕಿರಿಯ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

5) ವರ್ಷಋತು ರಸ್ತೆಯಲ್ಲಿ ಸಾರ್ವಜನಿಕರು/ಅಂಗಡಿಯವರು ಪಾದಚಾರಿ ಮಾರ್ಗದಲ್ಲಿ ಅನುಪಯುಕ್ತ ವಸ್ತುಗಳನ್ನು ಹಾಕಿರುತ್ತಾರೆ ಈ ಸಂಬಂಧ ಸಂಬಂಧಪಟ್ಟವರಿಗೆ ನೋಟಿಸನ್ನು ನೀಡಿ ತೆರವುಗೊಳಿಸಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕಿರಿಯ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

**ಬೀದಿ ದೀಪ ನಿರ್ವಹಣೆ ಕುರಿತು**

1) ಹನುಮಂತನಗರ ವಾರ್ಡ್‌ನಲ್ಲಿ ಬರುವ ಗಂಗಾನದಿ ರಸ್ತೆ, ಹಿಂದೂ ಮಹಾಸಾಗರ ರಸ್ತೆ, ಬ್ರಹ್ಮಪುತ್ರ ನದಿ ರಸ್ತೆ, ಮತ್ತು ಮಹದೇವಶ್ವರ ದೇವಸ್ಥಾನದ ಎದುರು ವಿದ್ಯುತ್ ದೀಪ ಉರಿಯುತ್ತಿಲ್ಲ ವೆಂದು ಹಾಗೂ ಇದನ್ನು ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿದ್ಯುತ್ ದೀಪ ಸರಿಪಡಿಸಲು ವಿದ್ಯುತ್ ವಿಭಾಗ(ದ) ಬಿ.ಬಿ.ಎಂ.ಪಿ. ರವರಿಗೆ ಸೂಚಿಸಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

**ಆರೋಗ್ಯ ಇಲಾಖೆ/ಘನತ್ಯಾಜ್ಯ ಇಲಾಖೆ**

1) ಹನುಮಂತನಗರದ ಜೈನ್ ಅಪಾರ್ಟ್‌ಮೆಂಟ್ ಎದುರು ಬೀದಿ ಬದಿಯ ಪಾದಚಾರಿ ಮಾರ್ಗದಲ್ಲಿ ಬೀದಿ ಬದಿಯ ಅಂಗಡಿಗಳನ್ನು ತೆರವು ಮಾಡಿ ಪಾದಚಾರಿ ಮಾರ್ಗದಲ್ಲಿ ಸಾರ್ವಜನಿಕರು ಓಡಾಡಲು ಅನುಕೂಲ ಮಾಡಿಕೊಡಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ಹನುಮಂತನಗರ ರವರು ತಿಳಿಸಿದರು.

**ತೋಟಗಾರಿಕೆ ಇಲಾಖೆ:**

1) ಹನುಮಂತನಗರ ವಾರ್ಡ್‌ನಲ್ಲಿ ಬರುವ ಜಿಂಕೆ ಪಾರ್ಕ್,ಹರಿಹರಗುಡ್ಡ ಪಾರ್ಕ್ ಮತ್ತು ಇತರೇ ಪಾರ್ಕ್‌ಗಳಲ್ಲಿ ಸರಿಯಾಗಿ ನಿರ್ವಹಣೆ ಮಾಡುತ್ತಿರುವುದಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ಪಾರ್ಕ್‌ಗಳ ನಿರ್ವಹಣೆಯ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ತೋಟಗಾರಿಕೆ ಅಧೀಕ್ಷಕರು(ದ) ಬಿ.ಬಿ.ಎಂ.ಪಿ. ರವರಿಗೆ ಕೋರಲಾಗಿರುತದೆ.

Scanned with CamScanner

Scanned with CamScanner

**ಬಸವನಗುಡಿ ಸಂಚಾರಿ ಪೋಲೀಸ್ ಇಲಾಖೆ:**

1) ಶ್ರೀ.ಗವಿಗಂಗಾಧರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಹಾಗು ಇತರೆಡೆಗಳಲ್ಲಿ ಸುಮಾರು ದಿನಗಳಿಂದ ನಿಂತಿರುವ ಹಳೆಯ ಗಾಡಿಗಳು ನಿಂತಿರುವುದರಿಂದ ರಸ್ತೆಯ ಶುಚಿತ್ವ ಹಾಳಾಗಿರುತ್ತದೆ. ಆದ್ದರಿಂದ ಹಳೆಯ ಗಾಡಿಗಳನ್ನು ತೆರವುಗೊಳಿಸುವಂತೆ ಹಾಗೂ ಸದರಿ ಜಾಗದಲ್ಲಿ ನೋ ಪಾರ್ಕಿಂಗ್ ಬೋರ್ಡ್‌ಗಳನ್ನು ಅಳವಡಿಸುವಂತೆ ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು ಕ್ರಮಕೈಗೊಳ್ಳಲು ಸೂಚಿಸಿದರು.

ಸದರಿ ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಬಸವನಗಡಿ ಸಂಚಾರಿ ಪೋಲೀಸ್ ಠಾಣೆಯ ಎ.ಎಸ್.ಐ ರವರು ತಿಳಿಸಿದರು.

**ಅರಣ್ಯ ವಿಭಾಗ:**

1) ಹನುಮಂತನಗರದ 8ನೇ ಮುಖ್ಯರಸ್ತೆಯಲ್ಲಿ ಮರದ ಕೊಂಬೆಯನ್ನು ತೆರವು ಮಾಡಿಕೊಡುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಉಪ ಅರಣ್ಯ ಸಂರಕ್ಷಣಾಧಿಕಾರಿ(ದ) ರವರಿಗೆ ಬಿ.ಬಿ.ಎಂ.ಪಿ. ರವರಿಗೆ ಕೋರಲಾಗಿರುತ್ತದೆ.

ವಾರ್ಡ್ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತಿ ತಿಂಗಳ ಮೊದಲನೆಯ ಮತ್ತು ಮೂರನೇ ಶನಿವಾರದಂದು ವಾರ್ಡ್ ಕಮಿಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತಾ, ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸಹಿ) 08/3/21
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ ಸಂಖ್ಯೆ-155 ಹನುಮಂತನಗರ

(ಸಹಿ) 08.03.2021
ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು ವಾರ್ಡ
ಸಂಖ್ಯೆ-155 ಹನುಮಂತನಗರ

**ಪ್ರತಿಯನ್ನು,**

1. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
2. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ,
3. ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) /ಸ.ಕಾ.ನಿ.ಅ (ಬ.ಗು) ಉಪವಿಭಾಗ ರವರ ಅವಗಾಹನೆಗೆ.
4. ಆರೋಗ್ಯ ವೈದ್ಯಾಧಿಕಾರಿಗಳು, ಬಸವನಗುಡಿ ವಿಭಾಗ ರವರ ಅವಗಾಹನೆಗೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೆಸ್ಕಾಂ ಹನುಮಂತನಗರ ರವರ ಅವಗಾಹನೆಗೆ.
6. ಪೋಲೀಸ್ ಇನ್ಸ್‌ಪೆಕ್ಟರ್, ಬಸವನಗುಡಿ ಸಂಚಾರಿ ಪೋಲೀಸ್ ಠಾಣೆ ರವರ ಅವಗಾಹನೆಗೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ., ಎಂ.ಎನ್.ಕೆ ಪಾರ್ಕ್, ಬಸವನಗುಡಿ ರವರ ಅವಗಾಹನೆಗೆ.
8. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
9. ಕಛೇರಿ ಕಡತಕ್ಕೆ.

Scanned with CamScanner